
ತಿರುಮಲೆ ತಿರುಪತಿ ದೇವಸ್ಥಾನಗಳು

# ಬಾಲ ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಸೆಪ್ಟೆಂಬರ್ 2020

ಸಪ್ತಗಿರಿ ಅನುಬಂಧ



ಎಲ್ಲರಿಗೂ ಅಭಯವ ನೀಡುವ ಹಸ್ತ
ಎಂದಿಗೂ ಕುಂದದ ಕನಕ ಹಸ್ತ



ಜಗವಿದು ಜನಗಳ ರಂಗಭೂಮಿ... ನಗಿಸುವ ಅಳಿಸುವ ರಂಗಭೂಮಿ...

ತಿರುಮಲೆ ತಿರುಪತಿ ದೇವಸ್ಥಾನಗಳು

# ಬಾಲ ಸಪ್ತಗಿರಿ

ಸಪ್ತಗಿರಿ ಅನುಬಂಧ



ಸಂಪುಟ -01 ಸೆಪ್ಟೆಂಬರ್ - 2020 ಸಂಚಿಕೆ -07

## ವಿಷಯ ಸೂಚಿಕೆ


| | | ಪುಟ |
|---|---|---|
| ಹಿಂದೂ ದೇವರು | ಮಲೆಯಪ್ಪ<br>-ಶ್ರೀಮತಿ. ಎನ್. ಪಾರ್ವತಿ | 04 |
| ಹನ್ನೆರಡು ಆಳ್ವಾರರು | ಪೆರಿಯಾಳ್ವಾರ್<br>- ಶ್ರೀಮತಿ. ಸಿ.ಎಸ್. ಊರ್ಮಿಳಾ | 06 |
| ಕನ್ನಡ ಹರಿದಾಸವರೇಣ್ಯರು | ವಿಜಯದಾಸರು<br>- ಶ್ರೀಮತಿ. ಸುಧಾಮಧುಸೂದನ್ | 08 |
| ಚಿತ್ರಕಥೆ | ತುಂಬುರು ತೀರ್ಥ<br>ಕಥೆ - ಶ್ರೀನಿವಾಸ ದೀಕ್ಷಿತರು<br>ಚಿತ್ರಗಳು - ಪಿ. ಶಿವಪ್ರಸಾದ್ | 10 |
| ಬಾಲನೀತಿ | ಕೆಟ್ಟ ಕೆಲಸ ಮಾಡುವ ಮೊದಲು ಯೋಚಿಸು<br>- ಶ್ರೀಮತಿ. ಬಿ. ಪದ್ಮಜ | 14 |
| ಪ್ರಜ್ಞಾವಂತ ಬಾಲಕ - | ಜೆ. ಶ್ರೀಚರಣ್ | 16 |
| ಕ್ವಿಜ್ | -ಶ್ರೀಮತಿ. ಆರ್. ಕೃಷ್ಣವೇಣಿ | 17 |
| ಚಿತ್ರಲೇಖನ | | 18 |


ಮುಖಚಿತ್ರ - ಶ್ರೀ ವೆಂಕಟೇಶ್ವರ
ಹಿಂಬದಿಚಿತ್ರ - ಅನ್ನಮಯ್ಯ - ಸ್ವಾಮಿಯವರು

# ಮಲೆಯಪ್ಪ

- ಎಲ್.ಎನ್. ಚಂದ್ರಶೇಖರರಾವ್

- ಅನುವಾದ ಶ್ರೀಮತಿ. ಎನ್. ಪಾರ್ವತಿ

**ತಿರುಮಲೆ ಕ್ಷೇತ್ರ....**

ಅಶ್ವಯುಜ ಮಾಸ... ಬ್ರಹ್ಮೋತ್ಸವ ನಡೆಯುತ್ತದೆ. ಸಾಯಂಕಾಲ 7 ಗಂಟೆ...ಕತ್ತಲು ಕವಿಯುತ್ತಿದೆ. ತಿರುಮಲೆಯ ಮಹಾಬೀದಿಗಳಲ್ಲಿ ಎಣ್ಣೆಯ ದೀಪಗಳು ನಕ್ಷತ್ರಗಳಂತೆ ಮಿನುಗುತ್ತಿವೆ.

ಬೆಟ್ಟವೆಲ್ಲಾ ಭಕ್ತಜನರಿಂದ ತುಂಬಿ ಹೋಗಿದೆ. ಮಹಾಬೀದಿಗಳಲ್ಲೆಲ್ಲಾ ಇರುವೆಯೂ ತೂರಲಾರದಷ್ಟು ಜನ.

ಗೋವಿಂದ... ಗೋವಿಂದ...

ಗೋವಿಂದ.... ಎಂಬ ಭಕ್ತ ಜನರ ನಾಮಸ್ಮರಣೆ ಬೆಟ್ಟದ ಬ್ರಹ್ಮ ರಥವು ಪೂರ್ವದಲ್ಲಿನ ಬೀದಿಯನ್ನು ದಾಟಿ ದಕ್ಷಿಣದಲ್ಲಿನ ಬೀದಿಯಲ್ಲಿ ಸಾಗುತ್ತಿದೆ.

ಕಲಾಕಾರರು ಭಕ್ತಿಪರವಶರಾಗಿ ಕಲಾಪ್ರದರ್ಶನ ಮಾಡುತ್ತಾ ಮುಂದಕ್ಕೆ ಸಾಗುತ್ತಿದ್ದಾರೆ.



ಇನ್ನೊಂದೆಡೆ... ಆನೆಗಳು, ವೃಷಭಗಳು, ಅಶ್ವಗಳು.. ಠೀವಿಯಿಂದ ಸಾಗುತ್ತಿವೆ. ನಂತರ ಮಂಗಳ ವಾದ್ಯಗಳು...

ಮುಖ್ಯ ಬೀದಿಯಲ್ಲಿ ಎರಡೂ ಬದಿಗಳಲ್ಲಿ ದೊಡ್ಡ ದೊಡ್ಡ ದೀಪಗಳು ಆನಂದ ನಿಲಯದಿಂದ ವಾಹನವನ್ನು ಹತ್ತಿ ದಿವ್ಯ ಮನೋಹರ ರೂಪನಾದ ಶ್ರೀ ವೇಂಕಟೇಶ್ವರನ ಉತ್ಸವ ಮೂರ್ತಿಯಾದ ಶ್ರೀ ಉಗ್ರ ಶ್ರೀನಿವಾಸ ಮೂರ್ತಿ ದೇವರ ಸನ್ನಿಧಾನಕ್ಕೆ ಬಂದು ಹಾರಗಳನ್ನು ಅರ್ಪಿಸುತ್ತಿದ್ದರೆ...

ಭಕ್ತರ ನಾಮಸ್ಮರಣೆಯನ್ನು ಆಲಿಸುತ್ತಾ... ಅವರ

ಮೇಲೆ ಕರುಣೆ ಕಟಾಕ್ಷಗಳನ್ನು ಸುರಿಸುತ್ತಾ ಮುಂದಕ್ಕೆ ಸಾಗುತ್ತಿದ್ದಾನೆ. ಗೋವಿಂದ ನಾಮಗಳನ್ನು ಸ್ಮರಿಸುತ್ತಾ.. ಸ್ವಾಮಿಯನ್ನು ದರ್ಶಿಸುತ್ತಾ ಭಕ್ತರು ಪುಲಕಿತರಾಗುತ್ತಿದ್ದಾರೆ.

ಜನರು ಗುಸುಗುಸು ಮಾತನಾಡಲು ಆರಂಭಿಸಿದರು.

ಅಲ್ಲಿ ನೋಡು " ಅಲ್ಲಿ ಹೊಗೆ ಬರುತ್ತಿದೆ. .. ಬೆಂಕಿಯೂ ಬರುತ್ತಿದೆ. ಅನ್ನುತ್ತಾ ಸ್ವಾಮಿಯವರನ್ನು ದರ್ಶಿಸಲೆಂದು, ದರ್ಶನಕ್ಕೆ ನಿಂತ ಭಕ್ತರು ಒಂದು ಬಾರಿ ಉತ್ತರ ದಿಕ್ಕಿನಲ್ಲಿ ಬೀದಿಯ ಕಡೆ ನೋಡಲು ಹೋದರು.

ಬರು ಬರುತ್ತಾ ಬೆಂಕಿಯು ಎಲ್ಲಾ ಕಡೆ ಹರಡಿತು. ಅಗ್ನಿಗೆ ಗಾಳಿ ಜೊತೆಯಾಯಿತು. ಬೆಂಕಿ ಹೆಚ್ಚುತ್ತಾ ಹೋಯಿತು. ತಿರುಮಲೆಯಲ್ಲಿದ್ದ ಮನೆಗಳೆಲ್ಲಾ ಅಗ್ನಿಗೆ ಆಹುತಿ ಆದವು. ಎಲ್ಲರೂ ಭಯದಿಂದ ನಡುಗುತ್ತಿದ್ದರು.

"ಏಳು ಬೆಟ್ಟದೊಡೆಯಾ! ವೇಂಕಟರಮಣ.. ಇದೇನು ವೈಪರೀತ್ಯ.. ರಕ್ಷಿಸು ಸ್ವಾಮಿ!" ಅರ್ಚಕರೊಂದಿಗೆ ಅಧಿಕಾರಿಗಳು, ಭಕ್ತರು ಸ್ವಾಮಿಯವರನ್ನು ಪ್ರಾರ್ಥಿಸಲು ಹೋದರು...

ಅಷ್ಟರಲ್ಲಿ ಜನರೊಳಗಿಂದ ಒಬ್ಬ ವ್ಯಕ್ತಿ ಉತ್ಸವದ ಮುಂದೆ ಬಂದು ಏನೋ ಊಹಿಸಿದವನಂತೆ ಗಂಭೀರವಾಗಿ ನಿಂತು - " ಇನ್ನು ಮುಂದೆ ಉಗ್ರಶ್ರೀನಿವಾಸ ಮೂರ್ತಿಯನ್ನು ಹೀಗೆ ಪ್ರದರ್ಶಿಸಿದರೆ ಸ್ವಾಮಿಯವರಿಗೆ ಉಗ್ರತ್ವ ಬಂದು ಇಂತಹ ಘಟನೆಗಳು ಜರುಗುತ್ತವೆ... ಹತ್ತಿರದಲ್ಲಿ ಮಲೆಯಪ್ಪ ಬೆಟ್ಟದಲ್ಲಿ ನನ್ನ ವಿಗ್ರಹಗಳು ಇವೆ. ಅವುಗಳನ್ನು ತಂದು ಉತ್ಸವದಲ್ಲಿ ಬಳಸಿರಿ" ಎಂದು ಗಟ್ಟಿಯಾಗಿ ಕಿರುಚಿ ಇದ್ದಕ್ಕಿದ್ದಂತೆ ಅಲ್ಲಿಂದ ನಿರ್ಗಮಿಸಿದನು.

"ಅವನು ಯಾರು? ಎಲ್ಲಿ ಹೋದ? " ಎಂದು ಎಲ್ಲರೂ ನೋಡುತ್ತಿರುವಾಗಲೇ ಆ ವ್ಯಕ್ತಿಯು ಜನಜಂಗುಳಿಯಲ್ಲಿ ಸೇರಿ ಕಾಣದಂತೆ ಮಾಯವಾದನು. 'ಸ್ವಾಮಿ ! ನಮಗೆ ಮಾರ್ಗ ತೋರಿಸಿದರಿ" ಎಂದು ಎಲ್ಲರೂ ನಮಸ್ಕರಿಸುತ್ತಾ ಸ್ವಾಮಿಗೆ ಕೃತಜ್ಞತೆಗಳನ್ನು ಹೇಳುತ್ತಾ ಸಾಗಿದರು.

ಬೆಂಕಿಯು ನಿಧಾನವಾಗಿ ತಣ್ಣಗಾಯಿತು.

ಆನಂತರ ಮೂರನೇ ದಿನ ಅರ್ಚಕರು ಮಲೆಯಪ್ಪ ಬೆಟ್ಟಕ್ಕೆ ಹುಡಕಲು ಹೋದರು. ಶ್ರೀದೇವಿ, ಭೂದೇವಿ ಸಮೇತ ಸ್ವಾಮಿಯವರು ದರ್ಶನ ನೀಡಿ ದರು. ಅವುಗಳನ್ನು ತಂದು ದೇವಾಲಯದಲ್ಲಿ ಇರಿಸಿ ಪೂಜೆ ಮಾಡಿದರು. ಉತ್ಸವಗಳಲ್ಲಿ ಉಪಯೋಗಿಸುತ್ತಾ ಇದ್ದರು. ನಿತ್ಯ ಉತ್ಸವಗಳಲ್ಲಿ ಪಾಲ್ಗೊಂಡು ಸೇವೆಗಳನ್ನು ಸ್ವೀಕರಿಸುವ ಆ ಸ್ವಾಮಿಯೇ - ಶ್ರೀ ಮಲೆಯಪ್ಪ ಸ್ವಾಮಿ!



# ಪೆರಿಯಾಳ್ವಾರ್

ಶ್ರೀಮತಿ.ಸಿ.ಎಸ್. ಊರ್ಮಿಳಾ

ಜನನ - ಕಲಿಯುಗದ ಆರಂಭ 47 ನೇ ದಿನ ಕ್ರೋಧನ ಸಂವತ್ಸರ ಮಿಥುನಮಾಸ ಶುಕ್ಲಪಕ್ಷ ಏಕಾದಶೀ ಭಾನುವಾರಕೂಡಿದ ಸ್ವಾತೀ ನಕ್ಷತ್ರ ಗರುಡಾಂಶ ಸಂಭೂತರು.

ಈ ಆಳ್ವಾರರು ತಮಿಳು ನಾಡಿನ ಶ್ರೀ ವಿಲ್ಲಿಪುತ್ತೂರ್ ಎಂಬಲ್ಲಿ ಕಲಿಯುಗದ ಆರಂಭದಲ್ಲಿ 47 ನೇ ಕ್ರೋಧನ ಸಂವತ್ಸರ ಮಿಥುನ ಮಾಸ, ಶುಕ್ಲ ಪಕ್ಷ ಏಕಾದಶಿ ಭಾನುವಾರ ಕೂಡಿದ ಸ್ವಾತೀ ನಕ್ಷತ್ರದಲ್ಲಿ ಜನಿಸಿದರು. ಇವರ ತಂದೆಯ ಹೆಸರು ಮುಕುಂದಾಚಾರ್ಯ, ತಾಯಿ ಪದುಮೈ ನಂಗೈ ಎಂಬುವರು. ಇವರಿಗೆ ವಿಷ್ಣುಚಿತ್ತರ್ ಎಂಬ ಹೆಸರಿತ್ತು. ಇವರು ಶ್ರೀ ವಿಲ್ಲಿಪುತ್ತೂರ್‌ನಲ್ಲಿನ ದೇವಾಲಯದ ವಟಪತ್ರಶಾಯಿ ದೇವರಿಗೆ ಪ್ರತಿದಿನವೂ ತಮ್ಮ ತೋಟದಲ್ಲಿದ್ದ ಮಲ್ಲಿಗೆ, ಸಂಪಿಗೆ, ಮುಂತಾದ ಪುಷ್ಪಗಳನ್ನು ಸಂಗ್ರಹಿಸಿ ಮಾಲೆ ಮಾಡಿ ಸಮರ್ಪಿಸುತ್ತಿದ್ದರು. ಅಷ್ಟೇ ಅಲ್ಲ ತುಳಸೀಮಾಲೆಯನ್ನು ಸಮರ್ಪಿಸುತ್ತಿದ್ದರು. ಇವರ ಸಾಕು ಮಗಳೇ ಆಂಡಾಳ್. ಇವಳನ್ನು ಗೋದಾದೇವಿಯೆಂದು ಕರೆಯುತ್ತಾರೆ. ಭಗವಂತನ ಕೃಪೆಯಿಂದ ಅಂದರೆ 'ನಾರಾಯಣನೇ ಪರದೈವ'ಎಂದು ಪಾಂಡ್ಯ ರಾಜನ ಸಭೆಯಲ್ಲಿ ನಿರೂಪಿಸಿದುದರಿಂದ ಅವರಿಗೆ ರಾಜನು ಸಕಲ ಮರ್ಯಾದೆಗಳೊಡನೆ, ಆನೆಯ ಮೇಲೆ ಕುಳ್ಳಿರಿಸಿ ಸನ್ಮಾನಿ



ಸಿದನು. ಹೀಗೆ ನಗರದ ಬೀದಿಗಳಲ್ಲಿ ಮೆರವಣಿಗೆ ಮಾಡಿಸಿಕೊಂಡು ಹೋಗುತ್ತಿದ್ದಾಗ ಭಗವಂತನೇ ಭೂ ನೀಳಾ ಸಮೇತನಾಗಿ ಗರುಡಾರೂಢನಾಗಿ ದಿವ್ಯದರ್ಶನವನ್ನು ಆಕಾಶದಲ್ಲಿ ನೀಡಿದನು. ಇದನ್ನು ಕಂಡ ಪೆರಿಯಾಳ್ವಾರರು ಆ ದಿವ್ಯ ದಂಪತಿಗಳಿಗೆ ಯಾರ ಕಣ್ಣಾದರೂ (ದೃಷ್ಟಿ) ತಗುಲುತ್ತದೆಯೋ ಎಂದು ದೃಷ್ಟಿಯಾಗದಂತೆ "ಪಲ್ಲಾಂಡು, ಪಲ್ಲಾಂಡು" ಎಂದು ಭಗವಂತನಿಗೆ ಮಂಗಳಾಶಾಸನವನ್ನು ಮಾಡಿದರು.ಭಗವಂತನ ಬಾಲಲೀಲೆಗಳನ್ನು ಅವನ ಮಹಿಮೆಗಳನ್ನು ವಿವರಿಸುತ್ತಾ 'ಪೆರಿಯಾಳ್ವಾರ್ ತಿರುಮೊಳಿ' ಎಂಬ ಪ್ರಬಂಧವನ್ನು ರಚಿಸಿದರು. ಈ ಕೃತಿಯು 473 ಪಾಶುರಗಳಿಂದ ಕೂಡಿದೆ. ಪೆರಿಯಾಳ್ವಾರ್‌ರು ರಚಿಸಿದ ಮೊದಲ ಪಾಶುರ ಈ ಕೆಳಕಂಡಂತೆ ಇದೆ.

ಪಲ್ಲಾಂಡು ಪಲ್ಲಾಂಡು, ಪಲ್ಲಾಯಿರುತ್ತಾಂಡು

ಪಲಕೋಟಿ ನೂರಾಯಿರಮ್

ಮಲ್ಲಾಂಡ ತಿಣ್ಣೋಳ್ ಮಣಿವಣ್ಣಾ।

ಉನ್ ಶೆವ್ವಡಿ, ಶೆವ್ವಿ, ತಿರುಕ್ಕಾಪ್ಪು

# ವಿಜಯದಾಸರು

- ಶ್ರೀಮತಿ. ಸುಧಾಮಧುಸೂದನ್

ವಿಜಯದಾಸರು ಹುಟ್ಟಿದ್ದು ರಾಯಚೂರು ಜಿಲ್ಲೆಯ ಮಾನವಿಯ ಹತ್ತಿರದ ಚೀಕಲ ಪರಿಯೆಂಬ ಗ್ರಾಮ. ಇವರು ಶ್ರೀನಿವಾಸಪ್ಪ ಕೂಸಮ್ಮ ಎಂಬ ದಂಪತಿಗಳಲ್ಲಿ ಜನಿಸಿದರು. ಬಡತನದ ನಿಮಿತ್ತ ಲೌಕಿಕ ಈತಿ ಬಾಧೆಗಳಿಗೆ ಸಿಕ್ಕು ಬೆಂಡಾಗಿ ಕಾಶಿಗೆ ಹೋಗಿ, ಅಲ್ಲಿ ಗಂಗೆಯನ್ನು ದಾಟಿ, ವ್ಯಾಸಕಾಶಿಯನ್ನು ಸೇರಿದರು. ಅಲ್ಲಿ ಪುರಂದರದಾಸರು ಇವರ ಸ್ವಪ್ನದಲ್ಲಿ ಕಾಣಿಸಿಕೊಂಡು ಇವರಿಗೆ ವಿಜಯವಿಠಲನೆಂಬ ಅಂಕಿತವನ್ನು ಕೊಟ್ಟು ಗುರೂಪದೇಶಮಾಡಿದರು. ದಾಸಪ್ಪನು ಅಂದಿನಿಂದ ವಿಜಯದಾಸ ರಾದರು, ಇವರ ಚರಿತೆಯೇ ಆಗಿನಿಂದ ಬದಲಾಯಿಸಿತು. ಇವರೊಬ್ಬ ಸಂಸ್ಥಾನಾಧಿಪತಿಗಳಂತೆ ಇರಹತ್ತಿದರು. ಇವರು ಹೊದೆಡೆ ನೂರಾರು ಬ್ರಾಹ್ಮಣರ ಭೋಜನಗಳಾಗುತ್ತಿದ್ದವು. ನೂರಾರು ಜನ ಭಕ್ತರು ಇವರನ್ನು ಹಿಂಬಾಲಿಸುತ್ತಿದ್ದರು. ಇವರು ಅನೇಕ ಬಾರಿ ತಿರುಪತಿಯ ಯಾತ್ರೆಯನ್ನು ಮಾಡಿದರು. ಕಂಚಿ, ಕಾಳಹಸ್ತಿ ಶ್ರೀರಂಗ ಮೊದಲಾದ ಅನೇಕ ಕ್ಷೇತ್ರ



ಗಳಿಗೂ, ಉತ್ತರದಲ್ಲಿ ಕಾಶಿ ಮೊದಲಾದ ಕ್ಷೇತ್ರಗಳಿಗೂ ಅನೇಕ ಸಲ ಹೋಗಿದ್ದರು. ಇವರು ಅನೇಕ ಅದ್ಭುತ ಮಹಿಮೆಗಳನ್ನು ತೋರಿದರು. ಮಂತ್ರಾಲಯದಲ್ಲಿ ರಾಯರ ಬೃಂದಾವನದಲ್ಲಿ ಇವರು ಸಕಲ ಗುರುಗಳ ದರ್ಶನ ಪಡೆದು ಹಾಡಿದರು. ತಾವು ಪೂರ್ವದಲ್ಲಿದ್ದ ಸ್ಥಿತಿಯನ್ನೂ ಗುರ್ವನು ಗ್ರಹವಾದ ಮೇಲಿನ ತಮ್ಮ ಸ್ಥಿತಿಯನ್ನೂ ವಿಜಯದಾಸರೇ ಹೇಳಿಕೊಂಡು ಇದೆಲ್ಲ

ತಮ್ಮ ಗುರುಗಳಾದ ಪುರಂದರದಾಸರ ಅನುಗ್ರಹವೆಂದಿದ್ದಾರೆ. ಇವರ ಶಿಷ್ಯರಾದ ಗೋಪಾಲ, ಮೋಹನ, ಜಗನ್ನಾಥ ದಾಸಾದಿಗಳು ಅತ್ಯಂತ ಪ್ರಸಿದ್ಧರಾದ ಹರಿದಾಸರಾದರು. ಇವರು ಪೂರ್ವದಲ್ಲಿ ಏನೂ ಓದಿದವರಲ್ಲದಿದ್ದರೂ ಗುರ್ವನುಗ್ರಹವಾದ ಮೇಲೆ ಇವರಿಗೆ ದಿವ್ಯಜ್ಞಾನ ವಾಯಿತು. ಅಷ್ಟೇ ಅಲ್ಲ, ಇವರು ಅನುಗ್ರಹಿಸಿದ ಹುಲುಮನುಜರೂ ಸಹ ಶಾಸ್ತ್ರಾನುವಾದ ಮಾಡಲು ಶಕ್ತರಾದರು.ಇವರು ಚತುರ್ಮುಖ ಬ್ರಹ್ಮ ದೇವರನ್ನು ಸ್ತೋತ್ರಮಾಡಿದ್ದಾರೆ. ಇದರಿಂದಲೂ,ಮೋಹನ ದಾಸರಿಗೆ ಅಪಮೃತ್ಯು ನಿವಾರಣೆ ಮಾಡಲು ಯಮಲೋಕದಲ್ಲಿ ಇವರು ಭೃಗು ಋಷಿಗಳ ರೂಪದಿಂದ ಕಾಣಿಸಿ ಕೊಂಡರೆಂಬ ಐತಿಹ್ಯದಿಂದಲೂ, ಇವರನ್ನು ಭೃಗುಋಷಿಗಳ ಅಂಶವೆಂತಲೂ, ಪುರಂದರದಾಸರ ಮಕ್ಕಳಾದ ಮಧ್ವಪತಿಗಳ ಪುನರವತಾರವೆಂತಲೂ ಹೇಳುವ ವಾಡಿಕೆ ಇದೆ. ಇವರು 25 ಸಾವಿರ ಕೃತಿ ರಚಿಸಿರುವರು. ಅದರಲ್ಲಿ ಈಗ ಉಪಲಬ್ಧವಿರುವುದು ಬಹಳ ಸ್ವಲ್ಪ ಈಗಿರುವಷ್ಟು ಸಾಹಿತ್ಯವೇ ಅತ್ಯಂತ ಮಹತ್ವದ್ದೆನ್ನಬಹುದು. ಇದರಲ್ಲಿ ತಮ್ಮ ಗುರುಗಳಾದ ಪುರಂದರದಾಸರು, ರಾಘವೇಂದ್ರಸ್ವಾಮಿಗಳು, ವ್ಯಾಸರಾಯರು ಮೊದಲಾದ ಗುರುಸ್ತೋತ್ರ, ಭಗವಂತನ ಸ್ತೋತ್ರಾದಿಗಳು ಪ್ರಸಿದ್ಧವಾಗಿವೆ. ವಿಜಯದಾಸರ ಪದಗಳಿ ಗಿಂತಲೂ ಸುಳಾದಿಗಳ ಪ್ರಸಿದ್ಧಿ ಹೆಚ್ಚು. ಇವರ ಸುಳಾದಿಗಳು ಅತ್ಯಂತ ವಿಸ್ತಾರವಾಗಿದ್ದು ಅವುಗಳಲ್ಲಿ ಇವರು ಬಹು ಜಟಿಲವಾದ ಹಾಗೂ ಸೂಕ್ಷ್ಮವಾದ ಪ್ರಮೇಯಗಳನ್ನೂ, ಧ್ಯಾನ, ಉಪಾಸನಾಪ್ರಕಾರಗಳನ್ನೂ ತೀರ್ಥಕ್ಷೇತ್ರಗಳ ಮಹಿಮೆಯನ್ನೂ, ಚಕ್ರಾಬ್ಜಾದಿಕ ಮಂಡಲ ಮೊದಲಾದ ಮಂತ್ರ ರಹಸ್ಯಗಳನ್ನೂ ತಿಳಿಸಿರುವರು. ಇವರಿಂದ ಮಧ್ವಮತವು ಬಹುಮಟ್ಟಿಗೆ ಜನರ ನೆಚ್ಚಿನ ಮತವಾಯಿತೆನ್ನಬಹುದು. ಹೀಗೆ ಅನೇಕ ವಿಧವಾಗಿ ಭಾಗವತ ಧರ್ಮದ ಪ್ರಚಾರಮಾಡಿ ಗುಂತಕಲ್ಲಿನ ಹತ್ತಿರ "ಚಿಪ್ಪಗಿರಿ"ಯೆಂಬ ಗ್ರಾಮದಲ್ಲಿ ಇಹಲೋಕದ ವ್ಯಾಪಾರವನ್ನು ಮುಗಿ ಸಿದರು.ಇವರ ಶಿಷ್ಯರುಗಳು ಇವರನ್ನು ಪರಿಪರಿಯಾಗಿ ಸ್ತೋತ್ರ ಮಾಡಿ ದ್ದಾರೆ.

**ಚಿತ್ರಕಥೆ**

# ತುಂಬುರ ತೀರ್ಥ


ಕಥೆ:ತೆಲುಗು ಮೂಲ : ಡಿ.ಶ್ರೀನಿವಾಸ ದೀಕ್ಷಿತರು

ಅನುವಾದ : ಶ್ರೀಮತಿ

ಚಿತ್ರಗಳು : ಪಿ. ಶಿವಪ್ರಸಾದ್





9 ನೀನು ಒಪ್ಪಿದರೂ ಒಪ್ಪದಿದ್ದರೂ ಅದು ತಪ್ಪೇ .. ಅಕೃತ್ಯ!
10 ಮನ್ನಿಸು ಗಳೆಯನೇ
11 ನೀನು ಕ್ಷಮೆಗೆ ಅರ್ಹನಲ್ಲ! ಶಿಕ್ಷೆಯನ್ನು ಅನುಭವಿಸಬೇಕಾದ್ದೇ !..
12 ಇನ್ನೆಂದೂ ತಪ್ಪು ಮಾಡೆನು
13 ಇಂದಿನಿಂದ ನಿನಗೆ ಆಕಾಶದಲ್ಲಿ ವಿಹರಿಸುವ ಶಕ್ತಿ ನಶಿಸಿ ಹೋಗುತ್ತದೆ. ಕೆಳಗಿನವನಂತೆ ಭೂಲೋಕದಲ್ಲಿ ಬಿದ್ದಿರು. ಅಲ್ಲೇ ಇರು! ಇದೇ ನನ್ನ ಶಾಪ!
14 ದೇವರ್ಷಿ! ನಾರದ ಮನ್ನಿಸು!
15 ಕೂಡಲೇ ಶ್ರೀ ಹರಿಗಾನದ ಪುಣ್ಯ ಫಲದಿಂದಾಗಿ ತುಂಬುರನು ಶ್ರೀ ವೇಂಕಟಾಚಲದ ಮೇಲೆ ಘೋಣತೀರ್ಥದ ಬಳಿ ಬಂದು ಬಿದ್ದಿದ್ದಾನೆ. ಅಲ್ಲಿದ್ದ ಮುನಿವರ್ಯರುಗಳೊಂದಿಗೆ ತುಂಬರನು
16 ಮುನಿಗಳಿಗೆ ನಡೆದುದನ್ನೆಲ್ಲಾ ವಿವರಿಸಿದ್ದಾನೆ ತುಂಬುರನು
17 ಇದು ಶ್ರೀ ಹರಿಯ ನಿತ್ಯ ನಿವಾಸಾದ ವೇಂಕಟಾಚಲ
18 ಪೂಜ್ಯರೇ ನಾನೆಲ್ಲಿರುವೆ?
19 ಮುನಿವರ್ಯರೇ ನನಗೆ ಕರ್ತವ್ಯ ಭೋದನೆಯನ್ನು ಮಾಡಿರಿ
20 ನೀನಿಲ್ಲಿ ಬಂದು ಬಿದ್ದಿರುವುದು ನಿನ್ನ ಪೂರ್ವಫಲ ಸುಕೃತ


ಹೌದು! ನೀವಂದದ್ದು ಯಥಾರ್ಥವಾದುದು
21
ಗಂಧರ್ವನೇ ಎದುರಿಗಿರುವ ಈ ಘೋಣತೀರ್ಥದಲ್ಲಿ ನಿತ್ಯವೂ ಸ್ನಾನ ಮಾಡಿ ಕಠೋರದೀಕ್ಷೆಯಿಂದ ಶ್ರೀ ವೇಂಕಟೇಶ್ವರನನ್ನು ಕುರಿತು ತಪ್ಪಸ್ಸುಮಾಡು
22
ಎಷ್ಟು ಕಾಲ ತಪಸ್ಸು ಮಾಡಬೇಕೆನ್ನುವಿರಿ?
23
ಒಂದು ವರುಷಕಾಲ ಈ ತೀರ್ಥದ ಬಳಿಯಲ್ಲೇ ಮಾಡು. ಸ್ವಾಮಿ ತಪ್ಪದೇ ಕರುಣಿಸುತ್ತಾರೆ.
24
ಪಾಪ ಪರಿಹಾರಾರ್ಥವಾಗಿ ನೀವು ಹೇಳಿದಂತೆ ಮಾಡುತ್ತೇನೆ
ಕೃತಾರ್ಥನಾದನು!
25

ತುಂಬುರನ ಕಠೋರ ತಪಸ್ಸಿಗೆ ಮೆಚ್ಚಿ ಶ್ರೀ ವೇಂಕಟೇಶ್ವರ ಪ್ರತ್ಯಕ್ಷನಾಗಿದ್ದಾನೆ . ಆಗ ಆತನನ್ನು ಕೀರ್ತಿಸುತ್ತಾ ಮಧುರಗಾಯನ ಮಾಡಿದ್ದಾನೆ ತುಂಬುರನು 26




## ಮುಂದಿನ ಸಂಚಿಕೆಯಲ್ಲಿ....

ಶ್ರೀ ವೇಂಕಟೇಶ್ವರನ ಇನ್ನೊಂದು ದಿವ್ಯಲೀಲೆಯನ್ನು ತಿಳಿದು..
ಧನ್ಯರಾಗೋಣ...

**ಸ್ವಸ್ತಿ !**



## ನೀತಿಪಾಠ

# ಕೆಟ್ಟಕೆಲಸ ಮಾಡುವ ಮೊದಲು ಯೋಚಿಸು

- ಶ್ರೀಮತಿ. ಬಿ. ಪದ್ಮಜ

ಒಮ್ಮೆ ಒಂದು ಗುರು ಕುಲದಲ್ಲಿ ಓರ್ವ ಮಹಾನ್ ಗುರುಗಳಲ್ಲಿ ಅನೇಕ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರು. ಅವರುಗಳಿಗೆ ಗುರುಗಳು ಪ್ರತಿದಿನವೂ ನೀತಿಯನ್ನು ಬೋಧಿಸುತ್ತಾ ಜೀವನದಲ್ಲಿ ಯಾವ ರೀತಿ ನಡೆದುಕೊಳ್ಳಬೇಕು ಎಂಬುದರ ಬಗೆಗೆ ತಿಳಿಸಿ ಹೇಳುತ್ತಿದ್ದರು. ಆ ಶಿಷ್ಯರೆಲ್ಲರೂ ಗುರುಗಳ ಬೋಧನೆಯನ್ನು ಅರಿತು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಆದರೆ ಆ ಶಿಷ್ಯರುಗಳಲ್ಲಿ ಅತಿ ಕೆಟ್ಟ ಗುಣವನ್ನು ಹೊಂದಿದ ಒಬ್ಬ ಶಿಷ್ಯನಿದ್ದ. ಅವನಿಗೆ ಗುರುಗಳ ಬೋಧನೆ ಸ್ವಲ್ಪವೂ ಪ್ರಭಾವ ಬೀರಲಿಲ್ಲ. ಅವನು ಮತ್ತೊಬ್ಬರನ್ನು ಹಿಂಸಿಸುವುದು. ಬೇರೊಬ್ಬರ ವಸ್ತುಗಳನ್ನು ಕಳ್ಳತನ ಮಾಡುವುದು, ಸುಳ್ಳು ಹೇಳುವುದು ಇಂತಹ ಕೆಟ್ಟ ಕೆಲಸಗಳನ್ನು ಅಭ್ಯಾಸ ಮಾಡಿಕೊಂಡಿದ್ದ, ಗುರುಗಳು ಆ ಶಿಷ್ಯನ ನಡವಳಿಕೆಯನ್ನು ತಿದ್ದುವುದಕ್ಕೆ ಬಹಳ ಪ್ರಯತ್ನ ಪಟ್ಟರು.

ಅವನನ್ನು ಹತ್ತಿರಕ್ಕೆ ಕರೆದು ಒಳ್ಳೆಯ ಮಾತಿನಲ್ಲಿ ಹೇಳಿದರು, ಹೆದರಿಸಿ ನೋಡಿದರೂ ಹೊಡೆದು ನೋಡಿದರು ಆದರೂ ಅವನು ದಾರಿಗೆ ಬರಲಿಲ್ಲ. ಅದಕ್ಕೆ ಆ ಗುರುಗಳು ಒಂದು ಉಪಾಯವನ್ನು ಹೂಡಿದರು. ಅವನಿಗೆ ಬುದ್ಧಿ ಹೇಳುವುದನ್ನು ಬಿಟ್ಟು ಆ ಶಿಷ್ಯನು ಕೆಟ್ಟ ಕೆಲಸ ಮಾಡಿದಾಗಲೆಲ್ಲಾ ಗೋಡೆಗೆ ಒಂದು ಮೊಳೆಯನ್ನು ಹೊಡೆಯುತ್ತಿದ್ದರು. ಆ ಶಿಷ್ಯನ ಕೆಟ್ಟ ವರ್ತನೆಯಿಂದಾಗಿ ಕೆಲವು ದಿವಸಗಳಿಗೆ ಆ ಗೋಡೆ ಮೊಳೆಗಳಿಂದ ತುಂಬಿ ಹೋಯ್ತು. ಹೀಗೆ ಒಮ್ಮೆ ಆ ಶಿಷ್ಯ ಕಳ್ಳತನದ ಆರೋಪದ ಮೇಲೆ ರಾಜ ಭಟರುಗಳ ಕೈಗೆ ಸಿಕ್ಕ ಬಿದ್ದ . ಅವರು ರಾಜನ ಬಳಿಗೆ ಅವನನ್ನು

ಎಳೆದು ಕೊಂಡು ಹೋದರು. ರಾಜನೂ ವಿಚಾರಣೆ ನಡೆಸಿ ಅವನಿಗೆ ಗಲ್ಲು ಶಿಕ್ಷೆಯನ್ನು ಜಾರಿ ಮಾಡಿದ. ಆಗ ಶಿಷ್ಯ ತನ್ನ ಗುರುಗಳನ್ನು ಸ್ಮರಿಸಿದ. ಕೂಡಲೇ ಗುರುಗಳು ಅಲ್ಲಿಗೆ ಬಂದರು. ಅವರನ್ನು ನೋಡುತ್ತಲೇ ಶಿಷ್ಯನು ಇನ್ನು ಮುಂದೆ ತಾನು ಇಂತಹ ಕೆಟ್ಟ ಕೆಲಸವನ್ನು ಮಾಡುವುದಿಲ್ಲವೆಂದೂ ತನ್ನನ್ನು ಈ ಶಿಕ್ಷೆಯಿಂದ ಕಾಪಾಡಬೇಕೆಂದು ಬೇಡಿಕೊಂಡ. ಅವನ ಮಾತನ್ನು ಕೇಳಿ ಗುರುಗಳು ರಾಜನಲ್ಲಿ ಕ್ಷಮಾಭಿಕ್ಷೆಯನ್ನು ಯಾಚಿಸಿ ಅವನನ್ನು ಆ ಶಿಕ್ಷೆಯಿಂದ ಬಿಡಿಸಿ. ಪುನಃ ತಮ್ಮ ಆಶ್ರಮಕ್ಕೆ ಕರೆದುಕೊಂಡು ಬಂದರು. ಈ ಘಟನೆಯ ನಂತರ ಆ ಶಿಷ್ಯ ತನ್ನೆಲ್ಲಾ ಕೆಟ್ಟ ಕೆಲಸಗಳನ್ನು ಬಿಟ್ಟು ಒಳ್ಳೆಯ ದಾರಿಯಲ್ಲಿ ನಡೆಯ ತೊಡಗಿದ. ಈಗ ಗುರುಗಳು ಆ ಶಿಷ್ಯನು ಒಳ್ಳೆಯ ಕೆಲಸಗಳನ್ನು ಮಾಡಿದಾಗಲ್ಲಾ ಅವರು ಗೋಡೆಗೆ ಹೊಡೆದಿದ್ದ. ಒಂದೊಂದೇ ಮೊಳೆಯನ್ನು ಕೀಳತೊಡಗಿದರು. ಕೊನೆಗೊಮ್ಮೆ ಆ ಗೋಡೆಯ ಮೇಲಿದ್ದ ಮೊಳೆಗಳೆಲ್ಲ ಖಾಲಿಯಾಗ ತೊಡಗಿದವು. ಕೊನೆಯ ಮೊಳೆಯನ್ನು ಕೀಳುವ ದಿನ ಆ ಶಿಷ್ಯನು ಬೆಂಕಿ ಹತ್ತಿ ಕೊಂಡಿದ್ದ ಬಂದು ಮನೆಯೊಳಗೆ ಧೈರ್ಯದಿಂದ ಅದರಲ್ಲಿ ಸಿಲುಕಿದ್ದ ಮಗುವನ್ನು ರಕ್ಷಿಸಿದ್ದ. ಆದರೂ ಜನ ಅವನು ಕಳ್ಳತನ ಮಾಡುವುದಾಕ್ಕಾಗಿಯೇ ಮನೆಯೊಳಗೆ ಹೋದನೆಂದು ಭಾವಿಸಿ ಅವನನ್ನು ಚೆನ್ನಾಗಿ ಥಳಿಸಿದರು. ಗುರುಗಳು ಅವರುಗಳಿಂದ ಶಿಷ್ಯನನ್ನು ಬಿಡಿಸಿಕೊಂಡು ಬಂದು, ಆ ಗೋಡೆಯಲ್ಲಿ ಕೊನೆಯ ಮೊಳೆಯನ್ನು ಕಿತ್ತರು. ಆಗ ಶಿಷ್ಯನು ಗೊಡೆಗಳತ್ತ ನೋಡಿ.

"ಗುರುಗಳೆ ಗೋಡೆಯಿಂದ ಮೊಳೆಗಳನ್ನು ಕಿತ್ತು ಹಾಕಿದ ಮೇಲೆ ಮೊಳೆ ಹೊಡೆದ ಗುರುತು ಇನ್ನೂ ಹಾಗೆ ಉಳಿಯಿತಲ್ಲ" ಎಂದ ಅದಕ್ಕೆ ಗುರುಗಳು, ಹೌದು ಮಗೂ ! ಒಂದು ಸಲ ಕೆಟ್ಟ ಕೆಲಸವನ್ನು ಮಾಡಿ ಕೆಟ್ಟವನೆಂದು ಹೆಸರುಗಳಿಸಿದ ಮೇಲೆ, ಅವನು ಒಳ್ಳೆಯ ಕೆಲಸ ಮಾಡಿದರೂ ಆ ಅಪವಾದ ಹೋಗುವುದಿಲ್ಲ ಅದಕ್ಕೆ ಕೆಟ್ಟ ಕೆಲಸ ಮಾಡುವ ಮೊದಲು ನೂರು ಬಾರಿ ಯೋಚಿಸಬೇಕು ಎಂದು ಗುರುಗಳು ಅವನಿಗೆ ಬೋಧಿಸಿದರು.

**ನೀತಿ :** ಯಾವುದೇ ಕೆಲಸ ಮಾಡಬೇಕಾದರೂ ಒಮ್ಮೆ ಯೋಚಿಸಬೇಕು, ಆದರೆ ಕೆಟ್ಟ ಕೆಲಸ ಮಾಡುವ ಮೊದಲು ನೂರು ಬಾರಿ ಯೋಚಿಸಬೇಕು.

**ಆಧಾರ : ಉಪನಿಷತ್ತಿನಿಂದ ಆಯ್ದ ನೀತಿ ಕಥೆ**

# ಪ್ರಜ್ಞಾವಂತ ಬಾಲಕ



**ಹೆಸರು :** ಜೆ. ಶ್ರೀಚರಣ್

**ತರಗತಿ : -** 4 ನೇ ತರಗತಿ

**ತಂದೆಯ ಹೆಸರು :** ಜನಾರ್ಧನ್

**ತಾಯಿಯ ಹೆಸರು :** ರಮ್ಯ ಜನಾರ್ಧನ್

**ಪಾಠಶಾಲೆಯ ಹೆಸರು :** ಮಾಡ್ರನ್ ಶಾಲೆ

ಈ ಬಾಲಕ ತನ್ನ ವಿಶೇಷ ಪ್ರತಿಭೆಯಿಂದ ಅನೇಕ ಪುರಸ್ಕಾರಗಳನ್ನು ತನ್ನದಾಗಿಸಿಕೊಂಡಿದ್ದಾನೆ. ಜೊತೆಗೆ ಕೋವಿಡ್ ಕಾರಣದಿಂದಾಗಿ ದೇಶದೆಲ್ಲೆಡೆ ಲಾಕ್‌ಡೌನ್ ಆದ ತರುಣದಲ್ಲಿ ಈ ಬಾಲಕ ಅಂತರ್ಜಾಲದ ಮೂಲಕ ನಡೆದ ಅನೇಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಪುರಸ್ಕಾರಗಳನ್ನು ಪಡೆದುಕೊಂಡಿದ್ದಾನೆ.

1. ಶ್ರೀ ಹಯಗ್ರೀವ ಸಾಂಸ್ಕೃತಿಕ ಅಕಾಡಮಿ, ಕಲ್ಪಾಕಮ್ ಅವರು ಆಯೋಜಿಸಿದ್ದ ಸಂಗೀತ ಸ್ಪರ್ಧೆಯಲ್ಲಿ ಮೊದಲ ಬಹುಮಾನ.

2. ಆಡಂಬಕ್ಕಂ ರೋಟರಿ ಕ್ಲಬ್ ಅವರು ಆಯೋಜಿಸಿದ್ದ ಶ್ಲೋಕಗಳ ಸ್ಪರ್ಧೆಯಲ್ಲಿ ಮೊದಲನೆಯ ಬಹುಮಾನ.

3. ಲೋಟಸ್ ವೆಲ್‌ಫೇರ್ ಚಾರಿಟೆಬಲ್ ಟ್ರಸ್ಟ್, ಚೆನ್ನೈ ಇವರು ಆಯೋಜಿಸಿದ್ದ ದೇಶಭಕ್ತಿ ಗೀತೆಗಳ ಸ್ಪರ್ಧೆಯಲ್ಲಿ ಮೊದಲನೆಯ ಬಹುಮಾನ.

4.ಆರ್ಟ್‌ಡ್ರೀಮ್ಸ್ ಎಕ್ಸ್‌ಪ್ರೆಸ್ ಸ್ಟುಡಿಯೋ, ಚೆನ್ನೈ, ಇವರು ಆಯೋಜಿಸಿದ್ದ ಶಾಸ್ತ್ರೀಯ ಹಾಡುಗಾರಿಕೆ ಸ್ಪರ್ಧೆಯಲ್ಲಿ ಮೊದಲ ಬಹುಮಾನ.

5. ಅಲ್ಪಾಡ್ಯಾನ್ಸ್ ಸ್ಟುಡಿಯೋ, ನಂದನವ್ ಇವರು ಆಯೋಜಿಸಿದ್ದ ಭಜನೆ ಗಾಯನ ಸ್ಪರ್ಧೆಯಲ್ಲಿ ಎರಡನೆಯ ಬಹುಮಾನ .

6. ಸ್ಮಾರ್ಟ್, ಸೂಪರ್ ಸ್ಟಾರ್ಸ್ 2020. ಇವರು ಕೃಷ್ಣಾಷ್ಟಮಿ ಸಂದರ್ಭದಲ್ಲಿ ಆಯೋಜಿಸಿದ್ದ ಹಾಡಿನ ಸ್ಪರ್ಧೆಯಲ್ಲಿ ಮೊದಲನೆಯ ಬಹುಮಾನ

7. ಸ್ಮಾರ್ಟ್ ಸೂಪರ್ ಸ್ಟಾರ್ಸ್ 2020 ಅವರು ಆಯೋಜಿಸಿದ್ದ ಪದಗಳನ್ನು ಹುಡುಕುವ ಸ್ಪರ್ಧೆಯಲ್ಲಿ ಮೊದಲನೆಯ ಬಹುಮಾನ.

8. ಕಲಾಶ್ರಮ ಮಂಚ್ ಸಂಗೀತ ಅಕಾಡಮಿ ಅವರು ಆಯೋಜಿಸಿದ್ದ ಜನ್ಮಾಷ್ಟಮಿ ಹಾಡಿನ ಸ್ಪರ್ಧೆಯಲ್ಲಿ ಮೂರನೆಯ ಬಹುಮಾನ.

9. ವಲಿಯಂತ್ ಅಕಾಡಮಿ, ಅಶೋಕನಗರ್ ಅವರು ಆಯೋಜಿಸಿದ್ದ ಕೃಷ್ಣ ಜನ್ಮಾಷ್ಟಮಿ ಹಾಡಿನ ಸ್ಪರ್ಧೆಯಲ್ಲಿ ಮೊದಲನೆಯ ಬಹುಮಾನ.

10. ಟ್ವಿಂಕ್‌ಲಿಂಗ್ ಸ್ಟಾರ್ ಕಿಡ್ಸ್, ಚೆನ್ನೈ ಅವರು ಆಯೋಜಿಸಿದ್ದ ಕೃಷ್ಣಜನ್ಮಾಷ್ಟಮಿ ಹಾಡಿನ ಸ್ಪರ್ಧೆಯಲ್ಲಿ ಮೊದಲನೆಯ ಬಹುಮಾನ

11. ಎಕ್ಸ್‌ಕ್ಲೀಸ್ ಸಲ್ಯೂಷನ್ ಪ್ರೈ.ಲಿ. ನಾಗಂಬಾಕ್ಕಂ, ಚೆನ್ನೈ ಅವರು ಆಯೋಜಿಸಿದ್ದ ಶಾಸ್ತ್ರೀಯ ಸಂಗೀತ ಸ್ಪರ್ಧೆಯಲ್ಲಿ ಸ್ಪನ್ನಿಂಗ್ ವೋಕಲಿಸ್ಟ್ ಪ್ರಶಸ್ತಿ.

12. ಡಾಲ್ಫಿನ್ ಅಕಾಡಮಿ, ಚೆನ್ನೈ ಅವರು ಆಯೋಜಿಸಿದ್ದ ಶ್ಲೋಕದ ಸ್ಪರ್ಧೆಯಲ್ಲಿ ಉತ್ತಮ ಪ್ರತಿಭೆ ಪ್ರಶಸ್ತಿ. ಹೀಗೆ ಹಲವಾರು ಪ್ರಶಸ್ತಿಗಳನ್ನು ತನ್ನ ಮುಡಿಗೇರಿಸಿಕೊಂಡಿರುವ ಈ ಬಾಲಕ ಶ್ರೀ ವೇಂಕಟೇಶ್ವರನ ಕೃಪೆಯಿಂದ ಇನ್ನೂ ಹೆಚ್ಚಿನ ಸಾಧನೆಯನ್ನು ಮಾಡಿ ಉತ್ತುಂಗ ಶಿಖರಕ್ಕೇರಲಿ ಎಂದು 'ಬಾಲಸಪ್ತಗಿರಿ' ಹಾರೈಸುತ್ತಿದೆ.

# ಕ್ವಿಜ್

-ನಿರ್ವಹಣೆ ಶ್ರೀಮತಿ. ಆರ್. ಕೃಷ್ಣವೇಣಿ

1) ವಾಲ್ಮೀಕಿಯವರು ಯಾವ ವಂಶದಲ್ಲಿ ಜನಿಸಿದರು?

ಅ) ಸೂರ್ಯವಂಶ ಆ) ಚಂದ್ರವಂಶ

ಇ) ಭೃಗುವಂಶ ಈ) ಇಂದ್ರವಂಶ

2) ವಾಲ್ಮೀಕಿಯವರ ತಂದೆಯ ಹೆಸರೇನು?

ಅ) ಪ್ರಚೇತನ ಮಹರ್ಷಿ ಆ) ಗೌತಮ

ಇ) ಜಮದಗ್ನಿ ಈ) ಆಗಸ್ತ್ಯ

3) ವಾಲ್ಮೀಕಿಯವರಿಗೆ ಅವರ ತಂದೆ - ತಾಯಿಯರು ನಾಮಕರಣ ಮಾಡಿದ ಹೆಸರು ಯಾವುದು?

ಅ) ಧ್ರುವ ಆ) ಅಗ್ನಿಶರ್ಮ

ಇ) ಅಶ್ವತ್ಥಾಮ ಈ) ದಶರಥ

4) ಹುಟ್ಟಿದ ಮಗುವನ್ನು ಕಾಡಿನಲ್ಲಿ ಇರಿಸಿದ ವಾಲ್ಮೀಕಿಯನ್ನು ಯಾರು ಬೆಳೆಸಿದರು?

ಅ) ಋಷಿಗಳು ಆ) ಬೆಸ್ತರು

ಇ) ಮುನಿಗಳು ಈ) ಬೇಡರು

5) ದರೋಡೆಕೋರರಾದ ವಾಲ್ಮೀಕಿ ಮನಃ ಪರಿವರ್ತಿಸಿ 'ಮರಾ ಮರಾ' ಜಪಿಸಲು ಉಪದೇಶಿಸಿದವರು ಯಾರು?

ಅ) ಬಲರಾಮ ಆ) ಸುಧಾಮ

ಇ) ನಾರದ ಮಹರ್ಷಿಗಳು ಈ) ಪರಶುರಾಮ

6) ವಾಲ್ಮೀಕಿಗೆ ರಾಮಾಯಣ ರಚಿಸಲು ದಿವ್ಯಜ್ಞಾನ ನೀಡಿದವರು ಯಾರು?

ಅ) ಶ್ರೀ ಮಹಾವಿಷ್ಣು ಆ) ಕಲ್ಕಿ

ಇ) ಕೃಷ್ಣ ಈ) ಬ್ರಹ್ಮದೇವ

7) ವಾಲ್ಮೀಕಿ ಮಹರ್ಷಿಗಳ ಆಶ್ರಮವು ಯಾವ ನದಿಯ ತೀರದಲ್ಲಿತ್ತು?

ಅ) ಗಂಗಾ ಆ) ಯಮುನಾ

ಇ) ತಮಸಾ ಈ) ತುಂಗಭದ್ರಾ


• • • • • • • • • • • •

ಉತ್ತರಗಳು:

1) ಇ 2) ಅ 3) ಆ 4) ಈ 5) ಇ 6) ಈ 7) ಇ

# ಚಿತ್ರಲೇಖನ

ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......



ಮೇಲಿನ ಗೊಂಬೆಯನ್ನು ಕೆಳಗಿನ ಬಾಕ್ಸ್‌ನಲ್ಲಿ ಬರಿಯೋಣ...



ತಂದನಾನ ಅಹಿ - ತಂದನಾನ ಮಹಿತಂದನಾನ ಭಲೇ - ತಂದನಾನ...

SAPTHAGIRI (KANNADA) ILLUSTRATED MONTHLY Published by Tirumala Tirupati Devasthanams
printing on 25-08-2020. Regd. with the Registrar of Newspapers under "RNI" No.10742,
Postal Regd.No.TRP/14 - 2018-2020
Licensed to post without prepayment No.PMGK/RNP/WPP-04/2018-2020



ವಿಷ್ಣು ಕಥೆಯನ್ನಾಲಿಸುವುದೇ ಸೌಭಾಗ್ಯ
ವಿಷ್ಣು ಕಥೆಯೇ ನಿನಗೆ ನೂರು ಬಲ ಕೇಳೈ ಮನುಜ...